# <u>ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಪನಹಳ್ಳಿ</u>

ಸಿ ಸಿ ನಂಬರ 208/2018

| | | | |
|---|---|---|---|
| ಸಿಡಬ್ಲ್ಯೂ | 10 | ಪಿಡಬ್ಲ್ಯೂ | 8 |

ಸಾಕ್ಷಿದಾರರ ಹೆಸರು : ಸಂತೋಷ

ತಂದೆಯ ಹೆಸರು : ಪ್ರಭುಗೌಡ

ವಯಸ್ಸು : 31 ವರ್ಷ ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು 20.06.2026

ಉದ್ಯೋಗ : ವ್ಯವಸಾಯ

ವಾಸ ಸ್ಥಳ : ಬಳಿಗನೂರು

**<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:-</u>**

17.06.2018 ರಂದು ಬೆಳಿಗ್ಗೆ 8.30 ಗಂಟೆಗೆ ಕುಬೇರ ಗೌಡ ಮನೆಯ ಮುಂದೆ ಜಗಳ ಆಗಿರುತ್ತದೆ. ಸಿದ್ದಮ್ಮ ಮನೆಯಲ್ಲಿ ಟೀ ಕುಡಿಯುತ್ತಿದ್ದಾಗ ಶ್ರೀಮಾತಮ್ಮ ಏಕಾ ಏಕಿ ಬಂದು ಸಿದಮ್ಮ ಜಡೇ ಹಿಡಿದು ಕೈ ಕಾಲುಗಳಿಂದ ಹೊಡೆದರು. ಚಂದ್ರಪ್ಪ ಬಂದು ಕಣಗ ದಿಂದ ಸಿದ್ದಮ್ಮನ ತಲೆಗೆ ಹೊಡೆದಿರುತ್ತಾರೆ. ಮೇಘರಾಜ ಬಿಡಿಸಲು ಬಂದಾಗ ಅವರಿಗೂ ಕಣಗ ದಿಂದ ಹೊಡೆದಿರುತ್ತಾರೆ. ಬಸವನಗೌಡರ ಮೇಲೆ ನಾರಪ್ಪ ಕೊಟ್ರೇಶಪ್ಪ ಚಂದ್ರಪ್ಪ ಬಸವರಾಜ ದೊಣೆಯಿಂದ ಹಲ್ಲೆ ಮಾಡಿರುತ್ತಾರೆ. ಕುಬೇರಗೌಡನಿಗೆ ಕುಡುಗೋಲಿನಿಂದ ಎಡಗೈಗೆ ಗಾಯ ಆಗುವ ರೀತಿ ಹೊಡೆದಿರುತ್ತಾರೆ. ಬಿಡಿಸಲು ಬಂದ ಅಂಬೀಕಳಿಗೂ ಕೂಡ ಶ್ರೀಮಾತಮ್ಮ ಕಿವಿಯ ಹತ್ತಿರ ಬಲವಾದ ಗಾಯ ಮಾಡಿರುತ್ತಾರೆ. ಹೊಲಕ್ಕೆ ಬಂದರೆ ಹೂತುಹಾಕುತ್ತೇನೆ ಅಂತಾ ಜೀವ ಬೆದರಿಕೆ ಹಾಕಿರುತ್ತಾರೆ. ಅವ್ಯಾಚ್ಯಶಬ್ದಗಳಿಂದ ಬೈದಿರುತ್ತಾರೆ. ನಾನು ಚಂದ್ರಪ್ಪನಿಂದ ಕುಡುಗೋಲನ್ನುಕ ಸಿದು ಸಿದ್ದಮ್ಮ ಮತ್ತು ಕುಬೇರ ಗೌಡನಿಗೆ ಆಸ್ಪತ್ರೆಗೆ ಕಳುಹಿಸಿರುತ್ತೇನೆ. ಕುಡಗೋಲು ಮತ್ತು ಕಣಗ ಗುರುತಿಸುತ್ತೇನೆ. ಅವುಕಿಗಳನ್ನು ಈಗಾಗಲೇ ಮು ಮಾ 1 ರಿಂದ 3 ಅಂತಾ ಗುರುತಿಸಲಾಗಿದೆ. ಆರೋಪಿತರನ್ನು ಗುರುತಿಸುತ್ತೇನೆ.

**(ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ಅನುಮತಿಸಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.